## ಸುಮ್ನೆ ಮಲಗಿಕೊಳ್ಳಿ...

ಗುಂಡ ಮಧ್ಯರಾತ್ರಿ ನಿದ್ದೆಗಣ್ಣಲ್ಲಿ ಪಮ್ಮಿಯ ಫೋನಿಗೆ ಮೆಸೇಜ್ ಬಂದದ್ದನ್ನು ಓದಿದ. ತಕ್ಷಣ, ಪಕ್ಕದಲ್ಲಿ ಮಲಗಿದ್ದ ಪಮ್ಮಿಯನ್ನು ಎಬ್ಬಿಸಿ ಯಾರೇ ಅದು, ನಿನಗೆ ತಡರಾತ್ರಿಯಲ್ಲಿ 'BEAUTIFUL' ಅಂತ ಮೆಸೇಜ್ ಕಳಿಸಿದ್ದು ಎಂದು ಕೋಪದಿಂದ ಕೇಳಿದ.

ಪಮ್ಮಿ ಆ ಮೆಸೇಜ್ ನೋಡಿ, 'ರೀ, ಸುಮ್ನೆ ಮಲಗಿಕೊಳ್ರೀ, ಅದು ಬ್ಯೂಟಿಫುಲ್ ಅಲ್ಲ, 'BATTERY FULL' ಅಂತ ಬಂದಿರೋದು ಎಂದಾಗ, ಗುಂಡನಿಗೆ ಅವಮಾನವಾಗಿ ಮುಸುಕೆಳೆದು ಮಲಗಿಕೊಂಡ.

**ವಿ. ವಿಜಯೇಂದ್ರ ರಾವ್**



ಕಲೆ: ಗಣೇಶ ಆಚಾರ್ಯ

---

## 64 ಹಲ್ಲು ಉದುರಿಸುವೆ!

ಕೇಶವ ಹಾಗೂ ಮಹೇಶನ ಜಗಳ ತಾರಕಕ್ಕೇರಿತ್ತು. ಕೇಶವ, ಮಹೇಶನಿಗೆ, 'ಮೊದಲು ಗೌರವ ಕೊಟ್ಟು ಮಾತನಾಡು. ಇಲ್ಲ ಅಂದ್ರೆ ನಿನ್ನ 32 ಹಲ್ಲುಗಳನ್ನು ಉದುರಿಸಿ ಬಿಡುತ್ತೇನೆ' ಎಂದ.



ಅದಕ್ಕೆ ಮಹೇಶ ಪ್ರತಿಯಾಗಿ 'ನಾನು ನಿನ್ನ 64 ಹಲ್ಲುಗಳನ್ನು ಉದುರಿಸಿಬಿಡುತ್ತೇನೆ' ಎಂದಾಗ, ಇವರ ಜಗಳವನ್ನು ನೋಡುತ್ತಾ ನಿಂತಿದ್ದ ನಾಣಿ, 'ಅಲ್ಲಯ್ಯ ಮಹೇಶ, ಅವನಿಗಿರೋದು 32 ಹಲ್ಲುಗಳು. 64 ಹಲ್ಲುಗಳನ್ನು ಹೇಗೆ ಉದುರಿಸುತ್ತೀಯಾ?' ಎಂದು ಕೇಳಿದರು.

'ಹೌದು ಅದು ನನಗೂ ಗೊತ್ತು ಹೇಗಿದ್ರು ನೀನು ಮಧ್ಯಸ್ಥಿಕೆಗೆ ಬರುತ್ತೀಯಾ ಎಂದು ತಿಳಿದಿತ್ತು. ಅದಕ್ಕೆ ಹಾಗೆ ಹೇಳಿದೆ' ಎಂದ. ಆಗ ನಾಣಿಗೆ ಯಾಕಾದರೂ ಕೇಳಿದೆನೋ ಅನಿಸಿತು!

**ಶಂಕರೇಗೌಡ ತುಂಬಕೆರೆ**